## ಆತ್ಮನಿಗಾಗಿ ಎಲ್ಲವೂ ಪ್ರಿಯ

**ಸ ಹೋವಾಚ ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತ್ಯಾತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ ।**

'ಪತಿಯ ಪ್ರೀತಿಗಾಗಿ ಪತಿಯನ್ನು ಪ್ರೀತಿಸುವುದಿಲ್ಲ. ಆದರೆ ಪತಿಯಲ್ಲಿ ಪ್ರೀತಿಯುಂಟಾಗುವುದು ತನ್ನನ್ನು(ಆತ್ಮ) ತಾನು ಪ್ರೀತಿಸುವುದರಿಂದ' (ಆತ್ಮಕಾಮಾಯ) ಆತ್ಮನಿಂದಲೇ ಆತ್ಮನಿಗಾಗಿ ಪ್ರೀತಿ. ಹೀಗೆಯೇ ಒಂದಲ್ಲ, ಅನೇಕ ರೀತಿಯಲ್ಲಿ ಈ ವಾದವನ್ನು ವಿವರಿಸಿ ಹೇಳಿ, ಸರ್ವವೂ ಆತ್ಮನಿಗಾಗಿ, ಆ ಆತ್ಮನನ್ನು ಕುರಿತು ಧ್ಯಾನಿಸಬೇಕು ಎಂದು ತಿಳಿಸುತ್ತಾರೆ.

**ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ ।**

ಈ ಆತ್ಮನನ್ನು ಕಾಣಬೇಕು ಅದನ್ನೇ ಕೇಳಬೇಕು, ಅದನ್ನೇ ಕುರಿತು ಚಿಂತಿಸಬೇಕು. ಅದನ್ನೇ ಉಪಾಸಿಸಬೇಕು. ಏಕೆಂದರೆ ಈ ಆತ್ಮದರ್ಶನದಿಂದ ಸರ್ವವೂ ವಿದಿತವಾಗುವುದು ಎಂದು ಯಾಜ್ಞವಲ್ಕ್ಯರು ತಿಳಿಸುತ್ತಾರೆ. ಇದು ಮೈತ್ರೇಯಿಯ ಮಾರ್ಗ.

ಭಗವದ್ಗೀತೆಯು ಸರ್ವ ಉಪನಿಷತ್ತುಗಳ ಸಾರ. ಗೀತೆಯು ಭಗವತ್ಸಾಕ್ಷಾತ್ಕಾರಕ್ಕೆ ಜ್ಞಾನಮಾರ್ಗ, ಕರ್ಮಮಾರ್ಗ ಮತ್ತು ಭಕ್ತಿ ಮಾರ್ಗಗಳನ್ನು ತಿಳಿಸುತ್ತದೆ. ಈ ಎಲ್ಲ ಮಾರ್ಗಗಳ ಉದ್ದೇಶ ಒಂದೇ ಆಗಿರುವುದರಿಂದ ಎಲ್ಲ ಮಾರ್ಗಗಳೂ ಶ್ರೇಷ್ಠ. ಮೈತ್ರೇಯಿ ಜ್ಞಾನಮಾರ್ಗದ ಮೂಲಕ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿದರೆ ಕಾತ್ಯಾಯಿನಿ ಕರ್ಮಮಾರ್ಗದಿಂದ ಬ್ರಹ್ಮ ಸಾಕ್ಷಾತ್ಕಾರವನ್ನು ಕಂಡಿದ್ದಾಳೆ. ಕಾತ್ಯಾಯಿನಿ ಸದ್ಯೋವಧುವಾಗಿ, ಮೈತ್ರೇಯಿ ಬ್ರಹ್ಮವಾದಿನಿಯಾಗಿ ಮಹಿಳೆಯ ಎರಡು ಮುಖಗಳ ಪರಿಚಯ ಮಾಡಿಸುತ್ತಾರೆ. ಹಿಂದೂ ಸಂಸ್ಕೃತಿಯ ಅನ್ಯಾದೃಶ ಕೊಡುಗೆ ಇದೆಂದು ಹೇಳಿದರೆ ಅತಿಶಯೋಕ್ತಿಯಲ್ಲ. *

---

# ವಿವೇಕ

ಭಗವಂತನೊಬ್ಬನೇ ಸತ್ಯ, ಉಳಿದುದೆಲ್ಲಾ ಅನಿತ್ಯ; ಆತನೊಬ್ಬನೇ ವಸ್ತು, ಉಳಿದುದೆಲ್ಲಾ ಅವಸ್ತು; ಕೇವಲ ಐಂದ್ರಜಾಲಿಕನೇ ಸತ್ಯ, ಆತನ ಇಂದ್ರಜಾಲ ಮಿಥ್ಯೆ— ಎಂಬ ಸದಸದ್ವಿಚಾರಕ್ಕೆ 'ವಿವೇಕ' ಅಂತ ಹೆಸರು.

ಮನಸ್ಸಿನಲ್ಲಿ ನಿವೃತ್ತಿಯುಂಟಾಯಿತು ಎಂದರೆ, ವಿವೇಕ ಉದಯವಾಗುತ್ತದೆ. ವಿವೇಕ ಬಂದ ಮೇಲೆ ಭಗವಂತನನ್ನು ಅರಿಯಬೇಕು ಎಂಬ ಇಚ್ಛೆಯುಂಟಾಗುತ್ತದೆ. ತಾತ್ತ್ವಿಕ ಭಾವನೆ ಮನಸ್ಸಿನಲ್ಲಿ ಮೂಡುತ್ತದೆ. ಬಳಿಕ ಮನಸ್ಸು ಇಚ್ಛೆ ಪಡುತ್ತದೆ 'ಶ್ರೀ ಕಾಳೀಸುರತರುವಿರುವಡೆಗೆ' ಹೋಗಲು.

ಅಸತ್ ವಸ್ತುಗಳನ್ನು ಎಂದರೆ ದೇಹಸುಖ, ಲೋಕಮಾನ್ಯತೆ, ಹಣ ಇವೇ ಮೊದಲಾದವುಗಳನ್ನು ಪ್ರೀತಿಸಿದರೆ, ಸತ್ ಸ್ವರೂಪನಾದ ಭಗವಂತನನ್ನು ಅರಿಯಲು ಇಚ್ಛೆಯುಂಟಾಗುವುದಿಲ್ಲ.

ಮನಸ್ಸು ಅಸತ್ ಮಾರ್ಗಕ್ಕೆ ಕಾಲು ಹಾಕಿತು ಎಂದೊಡನೆಯೇ ವಿಚಾರದಲ್ಲಿ ತೊಡಗಬೇಕಾಗುತ್ತದೆ. ಆನೆ ಬೇರೆಯವರ ತೋಟದಲ್ಲಿರುವ ಬಾಳೆಗಿಡಗಳ ಕಡೆ ನೋಡಿ ಸೊಂಡಿಲು ನೀಡಿತು ಎಂದರೆ ಅದಕ್ಕೆ ಮಾವಟಿಗನ ಅಂಕುಶದೇಟು ಬೀಳುತ್ತದೆ.

ಮೊದಲು ಹೃದಯ ಮಂದಿರದಲ್ಲಿ ಭಗವಂತನನ್ನು ಪ್ರತಿಷ್ಠಾಪನೆ ಮಾಡಿಕೊಳ್ಳಿ. ಬಳಿಕ ಇಚ್ಛೆಯಾದರೆ ಲೆಕ್ಚರ್ ಕೊಡಿ. ವಿವೇಕ ಗಳಿಸಿಕೊಳ್ಳದೆ ಕೇವಲ 'ಬ್ರಹ್ಮ,ಬ್ರಹ್ಮ' ಅಂತ ಹೇಳುತ್ತಿದ್ದರೆ ಏನು ದೊರಕೀತು? ಅದು ಬರೀ ಶಂಖಧ್ವನಿ ಮಾತ್ರ. ವಿವೇಕವಿಲ್ಲದೆ ಇತ್ತು ಎಂದರೆ ಮಾತುಕತೆ ಸರಿಯಾಗಿ ಹೊರಡದು.

ಸಾಗರದಲ್ಲಿ ಮುಳುಗು ಹಾಕಿದರೆ ಮೊಸಳೆ ಹಿಡಿದುಕೊಂಡುಬಿಡಬಹುದು. ಆದರೆ ಮೈಗೆ ಅರಿಸಿನ ಹಚ್ಚಿಕೊಂಡರೆ ಅದು ಹತ್ತಿರವೇ ಬರುವುದಿಲ್ಲ. ನಿಜ, ಹೃದಯರತ್ನಾಕರದ ಅಂತರಾಳದಲ್ಲಿ ಕಾಮಾದಿ ಷಡ್ರಿಪುಗಳು ಇವೆ, ಆದರೆ ವಿವೇಕ ಎಂಬ ಅರಿಸಿನವನ್ನು ಹಚ್ಚಿಕೊಂಡುಬಿಟ್ಟದ್ದೇ ಆದರೆ ಅವು ಹತ್ತಿರಕ್ಕೆ ಸುಳಿಯವು.

ವಿವೇಕವಿಲ್ಲದ ಬರೀ ಪಾಂಡಿತ್ಯ ಯಾವುದಕ್ಕೆ ಬಂದೀತು? ಪಂಡಿತರು ವೇದ, ಪುರಾಣ, ತಂತ್ರ ಇವುಗಳ ವಿಷಯವಾಗಿ ಕೇಳಿದ್ದಾರೆ, ಬಹಳ ತಿಳಿದುಕೊಂಡಿದ್ದಾರೆ. ಆದರೆ ಬರೀ ಪಾಂಡಿತ್ಯ ತೆಗೆದುಕೊಂಡು ಏನು ಮಾಡೋದು? ವಿವೇಕ ಬೇಕು. ಅವರಲ್ಲಿ ವಿವೇಕ ಇದ್ದರೆ ಮಾತ್ರ ಅವರ ಮಾತಿಗೆ ಬೆಲೆ ಕೊಡಬಹುದು.

ವಿವೇಕವಿಲ್ಲದ ಬರಿಯ ವಿದ್ವಾಂಸರ ದೃಷ್ಟಿ ಕಾಮಕಾಂಚನಗಳ ಮೇಲೆ ನೆಲೆಸಿರುತ್ತದೆ.ರಣಹದ್ದು ಎತ್ತರದಲ್ಲಿ ಹಾರುತ್ತಿರುತ್ತದೆ. ಆದರೆ ಅದರ ದೃಷ್ಟಿ ಮಾತ್ರ ಹೆಣದ ಗುಂಡಿಗಳ ಕಡೆಗೇ.

ಸಂಸಾರಿ ಜೀವರ ಮನಸ್ಸು ಬಗ್ಗಡದ ನೀರಾಗಿ ಬಿಟ್ಟಿರುವುದೇನೊ ನಿಜ. ಆದರೆ ಅದಕ್ಕೆ ಶುದ್ಧೀಕರಣ ವಸ್ತು ಹಾಕಿದರೆ ಮತ್ತೆ ಅದು ಶುದ್ಧ ಆಗಬಹುದು. ವಿವೇಕವೇ ಶುದ್ಧೀಕರಣ ವಸ್ತು.

ನೀರು ಸೋಸೋಯಂತ್ರದಿಂದ ನೀರನ್ನು ಶೋಧಿಸಿ ತೆಗೆದುಕೊಳ್ಳಬೇಕು. ಕೊಳೆಯನ್ನು ಹಿಂದೆ ಬಿಟ್ಟು ಶುದ್ಧವಾದ ನೀರು ಆ ಯಂತ್ರದಿಂದ ಹೊರಕ್ಕೆ ಬರುತ್ತದೆ. ವಿವೇಕವೆಂಬ ನೀರು ಸೋಸೋ ಯಂತ್ರವನ್ನು ಈ ಸಂಸಾರ ಸಾಗರದಲ್ಲಿ ಉಪಯೋಗಿಸಬೇಕು.

*ಶ್ರೀರಾಮಕೃಷ್ಣ ವಚನವೇದ* ದಿಂದ